೧	೨	೩	೪
೮	ಶ್ರೀ ಡಿ. ಟಿ. ಪುಟ್ಟಸ್ವಾಮಿ	೨೨-೨-೮೪	ಎರಡನೇ ಬಾರಿ
೯	ಶ್ರೀ ಎನ್. ಕೃಷ್ಣಪಿಳ್ಳೆ	೫-೭-೮೬	ಮೊದಲನೇ ಬಾರಿ
೧೦	ಶ್ರೀ ಸಿ. ಎಸ್. ನಾರಾಯಣರಾವ್	೫-೭-೮೬	,,
೧೧	ಶ್ರೀ ಕೆ. ಸಿ. ನಟರಾಜು	೨೭-೬-೮೭	,,
೧೨	ಶ್ರೀ ಸಂಬ್ಬರತ್ನ	೨೬-೬-೮೭	ಎರಡನೇ ಬಾರಿ
೧೩	ಶ್ರೀ ಕೃಷ್ಣ	೫-೬-೮೬	ಮೊದಲನೇ ಬಾರಿ
೧೪	ಶ್ರೀ ಟಿ. ನಾಗರಾಜಯ್ಯ	೫-೭-೮೬	,,
೧೫	ಶ್ರೀ ಸಿ. ಕೆ. ಈರೇಗೌಡ	೫-೭-೮೬	,,
೧೬	ಶ್ರೀ ಪಜಲೂರ್ ರೆಹಮಾನ್	೫-೭-೮೬	,,
೧೭	ವೆಂಕಟೇಶಯ್ಯ	೮-೫-೮೭	ಎರಡನೇ ಬಾರಿ

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ಮೈಸೂರು ನಗರಪಾಲಿಕೆಯಲ್ಲಿ ಆರೋಗ್ಯ ಸೇವಾ ಇಲಾಖೆಯಲ್ಲಿ ಯಾರು ಜೂನಿಯರ್ ಮತ್ತು ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ಸ್ ಇದ್ದಾರೆ ಅವರು ಆಲ್ಲಿರತಕ್ಕಂಥ ೯೭೦ ಪೌರ ಕಾರ್ಮಿಕರು ಏನಿದ್ದಾರೆ ಅವರ ರಕ್ತವನ್ನು ಹೀರತಕ್ಕಂಥಹವರು ಆಗಿದ್ದಾರೆ. ಅವರು ಸಂಬಳ ತೆಗೆದುಕೆ ಸಳ್ಳುವಾಗ, ಅಟೆಂಡೆನ್ಸ್ ಕೊಡುವಾಗ ಮತ್ತು ಡ್ಯೂಟಿಗೆ ಬರದೇ ಇದ್ದಾಗ ಬಂದಿದ್ದಾರೆ ಎಂದು ಹೇಳಿ ಅಟೆಂಡೆನ್ಸ್ ಕೊಡುವಾಗ ಪೌರ ಕಾರ್ಮಿಕರಿಂದ ದುಡ್ಡು ಕೀಳುತ್ತಾರೆ. ನನ್ನ ಮನವಿ ಏನೆಂದರೆ ಈ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುವ ಹೆಲ್ತ್ ಇನ್ಸ್‌ಪೆಕ್ಟರುಗಳು ಯಾರಿದ್ದಾರೆ ಅವರನ್ನು ಒಂದು ಜಾಗದಲ್ಲಿ ಮೂರು ವರ್ಷಗಳ ಮೇಲೆ ಇರಕೂಡದೆಂಬ ರೂಲ್ಸ್ ನಿಮ್ಮಲ್ಲಿದೆ. ನಗರಪಾಲಿಕೆಯಲ್ಲಿ ಶಂಚಿಯಾದ ಆಡಳಿತ ನಡೆಸಬೇಕು ಎಂಬದೃಷ್ಟಿಯಿಂದ ತಾವು ನಿರ್ದೇಶನಗಳನ್ನು ಕೊಡುತ್ತಿದ್ದೀರಿ. ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಮೂರು ವರ್ಷಕ್ಕೆ ಮೇಲ್ಪಟ್ಟು ೬ವರ್ಷಕ್ಕೆ ಹತ್ತಿರ ಹತ್ತಿರ ಇದ್ದಿ ಟ್ರಾನ್ಸ್‌ಫರ್ ಆಗದೆ ಯಾರು ಕಾರ್ಮಿಕರ ಶೋಷಣೆ ಮಾಡುತ್ತಿದ್ದಾರೋ ಅಂಥವರನ್ನು ಆದಷ್ಟು ಬೇಗ ಎತ್ತಂಗಡಿ ಮಾಡಬೇಕು.

ಶ್ರೀ ಎಂ. ಚಂದ್ರಶೇಖರ್.— ಸಾಮಾನ್ಯವಾಗಿ ಎರವಲು ಸೇವೆಯ ಮೇಲೆ ಬಂದಿರುವವರು ಮೂರು ವರ್ಷ ಸೇವೆಯಲ್ಲಿರುತ್ತಾರೆ. ತದನಂತರ ಅವರ ಮೇಲೆ ದೂರು ಬಂದಾಗ ಮೂಲ ಇಲಾಖೆಗೆ ಕಳಿಸುವುದು ವಾಡಿಕೆ. ಇಲ್ಲದೇ ಹೋದರೆ ೫ ವರ್ಷದವರೆಗೂ ಅವರನ್ನು ಇಟ್ಟುಕೊಳ್ಳಬಹುದು. ಆ ಅವಧಿಯ ನಂತರ ಬಹುತೇಕ ಜನರು ಹೋಗುತ್ತಾರೆ. ಕೆಲವಾರು ಕಾರಣಗಳಿಂದ ಕೆಲವರು ಉಳಿದುಕೊಳ್ಳುವುದು ಉಂಟು. ಅಂಥವರು ಈಗಾಗಲೇ ೬ ಮಂದಿ ಮಾತ್ರ ಇದ್ದಾರೆ. ಅವರನ್ನೂ ಮೂಲ ಇಲಾಖೆಗಳಿಗೆ ಕಳಿಸಲು ತೀರ್ಮಾನ ಮಾಡಲಾಗಿದೆ.

ರಾಜ್ಯದಲ್ಲಿ ಅಂಗೀಕೃತವಾದ ಕ್ರೀಡಾ ಸಂಸ್ಥೆಗಳ ಹೆಸರು

೧೬೦೪. ಶ್ರೀ ಎ. ಬಿ. ದೇಸಾಯಿ (ಧಾರವಾಡ).—ಮಾನ್ಯ ಗಣಿ ವಂತ್ರ ಭೂ ವಿಜ್ಞಾನ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಅಂಗೀಕೃತ ಕ್ರೀಡಾ ಸಂಸ್ಥೆಗಳ ಹೆಸರು ?

ಅ) ಸದರಿ ಕ್ರೀಡಾ ಸಂಸ್ಥೆಗಳಿಗೆ ಸರ್ಕಾರದಿಂದ ನೀಡಿರುವ ಒಟ್ಟು ಧನ ಸಹಾಯ ?

ಇ) ಕ್ರೀಡಾ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳು ?

ಶ್ರೀ ಆರ್. ಸಿ. ಜಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಕ್ರೀಡಾ ಪರಿಷತ್ತಿನಿಂದ ಮಾನ್ಯತೆ ಪಡೆದ ಒಟ್ಟು ೧೫ ಕ್ರೀಡಾ ಸಂಸ್ಥೆಗಳಿವೆ. ಅವುಗಳ ಪಟ್ಟಿಯನ್ನು ಲಗತ್ತಿಸಿದೆ.

ಆ) ಅಂಗೀಕೃತ ಕ್ರೀಡಾ ಸಂಸ್ಥೆಗಳಿಗೆ ಕಳೆದ ೩ ವರ್ಷಗಳಲ್ಲಿ ಕೊಟ್ಟಿರುವ ಒಟ್ಟು ಧನ ಸಹಾಯ ಕೆಳಕಂಡಂತಿದೆ.

೧ ೧೯೮೫-೮೬ನೇ ಸಾಲಿನಲ್ಲಿ ೩೬ ಕ್ರೀಡಾ ಸಂಸ್ಥೆಗಳಿಗೆ ನೀಡಲಾದ ಧನಸಹಾಯ ರೂ. ೧೦,೩೯,೪೪೦-೩೫.

೨ ೧೯೮೬-೮೭ನೇ ಸಾಲಿನಲ್ಲಿ ೩೦ ಸಂಸ್ಥೆಗಳಿಗೆ ರೂ. ೬,೮೦,೩೭೦-೫೫ ಧನ ಸಹಾಯ ನೀಡಲಾಗಿದೆ.

೩ ೧೯೮೭-೮೮ನೇ ಸಾಲಿನಲ್ಲಿ ೧೯ ಸಂಸ್ಥೆಗಳಿಗೆ ರೂ. ೩,೩೫,೭೧೦-೩೫ ಧನ ಸಹಾಯ ನೀಡಲಾಗಿದೆ.

ಇ) ಅನುದಾನ ಪಡೆದ ಕ್ರೀಡಾ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುವುದು.

೧ ಸಂಸ್ಥೆಗಳ ಪದಾಧಿಕಾರಿಗಳ ಸಭೆ ಕರೆದು ಸಮಸ್ಯೆಗಳನ್ನು ಚರ್ಚಿಸಿ ಸಲಹೆಗಳನ್ನು ನೀಡಲಾಗುವುದು.

೨ ಅನುದಾನ ನೀಡುವಾಗ ಕ್ರೀಡಾ ಪರಿಷತ್ತಿನ ಸರ್ಕಾರದ ಹಣ ವೆಚ್ಚ ಮಾಡುವ ಬಗ್ಗೆ ನಿಯಮಗಳನ್ನು ಸೂಕ್ತ ರೀತಿಯಲ್ಲಿ ತಿಳಿಸುವುದು.

೩ ಸಂಸ್ಥೆಯ ಕಾರ್ಯಕ್ರಮಗಳು ಮತ್ತು ವ್ಯವಹಾರಗಳು ಎಲ್ಲಾ ಸದಸ್ಯರುಗಳಿಗೂ ತಿಳಿಯಪಡಿಸುವ ಸಲುವಾಗಿ ವಾರ್ಷಿಕ ಸರ್ವ ಸದಸ್ಯ ಸಭೆಗಳನ್ನು ಏರ್ಪಡಿಸಲು ಸೂಚನೆಗಳನ್ನು ನೀಡಲಾಗುವುದು.

೪ ಅನುದಾನ ಪಡೆದ ಪೂರ್ತಿಕ್ಕೆ ಉಪಯೋಗಿತ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುದಾನ ಪಡೆದ ೯೦ ದಿನಗಳೊಳಗೆ ಸಲ್ಲಿಸುವ ಬಗ್ಗೆ ಮನದಟ್ಟು ಮಾಡುವುದು.

೫ ಸಂಸ್ಥೆಗಳು ತಮ್ಮ ಕಾರ್ಯಕ್ರಮದಲ್ಲಿ ಆಸಕ್ತಿ ವಹಿಸಲು ಉತ್ತೇಜನ ನೀಡುವುದು.

LIST OF THE SPORTS ASSOCIATIONS

1 Karnataka Amateur Athletic Association,
2 Karnataka Amateur Archery Association,
3 Karnataka Atya Patya Association,
4 Karnataka Amateur Body Builders Association,
5 Karnataka Badminton (Shuttle) Association,
6 Karnataka Ball Badminton Association,

7 Karnataka State Billiards Association,
8 Karnataka State Basketball Association,
9 Karnataka State Bridge Association,
10 Karnataka Amateur Boxing Association,
11 The National Association for the Blind,
12 Karnataka State Carrom Association,
13 Karnataka Amateur Cycling Association,
14 Karnataka State Cricket Association,
15 Karnataka Ladies Cricket Association,
16 Karnataka Chess Association,
17 The Association of the Deaf,
18 Karnataka Women's Football Association,
19 Karnataka State Football Association,
20 Karnataka State Gymnastic Association,
21 Karnataka State Women's Hockey Association,
22 Karnataka State Hockey Association,
23 Karnataka Amateur Handball Association,
24 Karnataka Judo Association,
25 Karnataka Karate-Do Association,
26 Karnataka Kho-Kho Association,
27 Karnataka Rajya Amateur Kabaddi Association,
28 Karnataka State Lawn-Tennis Association,
29 Karnataka Mountaineering Council,
30 Karnataka Olympic Association,
31 Karnataka Power-Lifting Association,
32 The National Society for Equal Opportunity for the Handicapped,
33 Karnataka States Riffle Associations,
34 Karnataka Roller Skating Association,
35 Karnataka Softball Association,
36 Karnataka Shooting Ball Association,
37 Karnataka State Swimming Association,
38 Karnataka Table Tennis Association,
39 Karnataka Tennikoit Association,

40 Karnataka Throwball Association,
41 Karnataka Volleyball Association,
42 Karnataka Veterns Athletic Association,
43 Karnataka Wrestling Association,
44 Karnataka Weight Lifters Association,
45 Karnataka Yoga Association,
46 Karnataka Tug-of-War Association,
47 Karnataka Sepak Takrew Association,
48 Karnataka Tae Know Do Association,
49 Karnataka Mallakhamba Association,
50 Karnataka State Baseball Association,
51 Karnataka Rowing Association.

ಶ್ರೀ ಎ. ಬಿ. ದೇಸಾಯಿ.—ಗ್ರಾಮೀಣ ಪ್ರದೇಶದ ಸಂಸ್ಥೆಗಳಿಗೆ ತಾವು ಎಷ್ಟು ಧನಸಹಾಯ ಮಾಡಿದ್ದೀರಿ ?

ಶ್ರೀ ರಮೇಶ್ ಜಿಗಜಿಣಗಿ.—ಆ ವಿವರ ನನ್ನ ಬಳಿ ಇಲ್ಲ. ಮಾನ್ಯ ಸದಸ್ಯರಿಗೆ ತರಿಸಿ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ಗಂರುಪಾದಪ್ಪನವರ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ. ಹಾಗೆಯೇ ಶ್ರೀ ಡಿ. ಟಿ. ಜಯಕುಮಾರ್ ಅವರು ಗೈರುಹಾಜರಿದ್ದಾರೆ.

ಹಳ್ಳಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ

೧೫೭೨. ಶ್ರೀ ಜಿ. ರಾಜುಗೌಡ (ಹುಣಸೂರು).— ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎರಡು ಸಾವಿರಕ್ಕಿಂತ ಹೆಚ್ಚಿನ ಜನಸಂಖ್ಯೆಯಿರುವ ಹಳ್ಳಿಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಇದುವರೆಗೆ ಎಷ್ಟು ಹಳ್ಳಿಗಳಲ್ಲಿ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು (ಎಆರ್‌ಡಬ್ಲ್ಯೂಎಸ್) ಯೋಜನೆ ಕೈಗೊಳ್ಳಲಾಗಿದೆ?

ಇ) ಉಳಿದ ಹಳ್ಳಿಗಳಿಗೆ ಯಾವಾಗ ನೀರು ಸರಬರಾಜು ಪೂರೈಸಲಾಗುವುದು, ಹಾಗೂ ಈ ಕಾರ್ಯಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ) ೨೧೮೪.

ಆ) ಎಆರ್‌ಡಬ್ಲ್ಯೂಎಸ್ ಮತ್ತು ಎನ್ ಆರ್‌ಡಬ್ಲ್ಯೂಎಸ್ ಯೋಜನೆಗಳಡಿಯಲ್ಲಿ ಇದುವರೆಗೂ ೧೦೧೧ ಹಳ್ಳಿಗಳಿಗೆ ನೀರು ಸರಬರಾಜು ಮಾಡಲಾಗಿದೆ. ಮತ್ತು ೫೯೯ ಹಳ್ಳಿಗಳಲ್ಲಿ ನೀರು ಸರಬರಾಜು ಯೋಜನೆ ನಡೆಯುತ್ತಿದೆ. ಚಾಲ್ತಿ ವರ್ಷದಲ್ಲಿ ೩೦೦ ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು.

ಇ) ಉಳಿದ ೨೭೪ ಹಳ್ಳಿಗಳಿಗೆ ೧೯೯೧-೯೨ರೊಳಗೆ ನೀರು ಸರಬರಾಜು ಯೋಜನೆಗಳನ್ನು ಪೂರೈಸುವ ನಿರೀಕ್ಷೆ ಇದೆ, ಇದಕ್ಕೆ ತಗಲುವ ವೆಚ್ಚ ಸುಮಾರು ೩೨.೦೦ ಕೋಟಿ ರೂಪಾಯಿಗಳು.